**ದಿನಾಂಕ 26–2–2019 ರಂದು ಬೆಳಿಗ್ಗೆ 11.00 ಗಂಟೆಗೆ ಕುಲಪತಿಯವರ ಸಭಾಂಗಣ, ಕೃವಿವಿ, ರಾಯಚೂರಿನಲ್ಲಿ ಜರುಗಿದ ರಾಯಚೂರು ಕೃಷಿ ವಿಶ್ವವಿದ್ಯಾಲಯದ ಮಾನ್ಯ ವ್ಯವಸ್ಥಾಪನಾ ಮಂಡಳಿಯ 39ನೇ (ವಿಶೇಷ) ಸಭೆಯ ನಡುವಳಿಗಳು:**

**ಉಪಸ್ಥಿತರು:**

| | | |
|---|---|---|
| 1. | ಡಾ. ಕೆ.ಎನ್. ಕಟ್ಟಿಮನಿ, ಮಾನ್ಯ ಕುಲಪತಿಗಳು, ಕೃವಿವಿ., ರಾಯಚೂರು | ಅಧ್ಯಕ್ಷರು |
| 2. | ಡಾ. ಶಿವರಾಜ ಪಾಟೀಲ್, ವಿಧಾನ ಸಭಾ ಸದಸ್ಯರು, ರಾಯಚೂರು | ಸದಸ್ಯರು |
| 3. | ಡಾ. ಎಂ. ಶೇಖರಗೌಡ, ಹೇರೂರು, ಗಂಗಾವತಿ, ಕೊಪ್ಪಳ ಜಿಲ್ಲೆ | ಸದಸ್ಯರು |
| 4. | ಶ್ರೀಮತಿ ಹೇಮಾವತಿ ಲಂಕೇಶ, ಗುಂಗಾವತಿ ಕೊಪ್ಪಳ ಜಿಲ್ಲೆ | ಸದಸ್ಯರು |
| 5. | ಶ್ರೀ ಅಮರೇಶ ಬಲ್ಲಿದವ, ದೇವದುರ್ಗ, ರಾಯಚೂರು ಜಿಲ್ಲೆ | ಸದಸ್ಯರು |
| 6. | ಶ್ರೀ ಸಿದ್ದಪ್ಪ ಭಂಡಾರಿ, ಕಲಮಲ, ರಾಯಚೂರು ಜಿಲ್ಲೆ | ಸದಸ್ಯರು |
| 7. | ಶ್ರೀ ವೀರನಗೌಡ ಪರಸರೆಡ್ಡಿ, ನಾಲವಾರ, ಚಿತ್ತಾಪುರ, ಕಲಬುರಗಿ ಜಿಲ್ಲೆ | ಸದಸ್ಯರು |
| 8. | ಡಾ. ಎಂ.ಜಿ. ಪಾಟೀಲ್, ಕುಲಸಚಿವರು, ಕೃವಿವಿ., ರಾಯಚೂರು | ಸದಸ್ಯ–ಕಾರ್ಯದರ್ಶಿ |

ಪ್ರಾರಂಭದಲ್ಲಿ, ಮಾನ್ಯ ವ್ಯವಸ್ಥಾಪನಾ ಮಂಡಳಿಯ ಸದಸ್ಯರೆಂದು ನೂತನವಾಗಿ ನಾಮನಿರ್ದೇಶನಗೊಂಡ ವಿಧಾನಸಭಾ ಸದಸ್ಯರಾದ ಶ್ರೀ ಶಿವರಾಜ ಪಾಟೀಲ್ ಇವರಿಗೆ ಮಾನ್ಯ ಕುಲಪತಿಗಳು ಹಾಗೂ ಸಭಾಧ್ಯಕ್ಷರು ಹೂ–ಗುಚ್ಛ ನೀಡುವುದರೊಂದಿಗೆ ಸ್ವಾಗತ ಕೋರಿದರು ಹಾಗೂ ಹಾಜರಿದ್ದ ಎಲ್ಲಾ ಸದಸ್ಯರನ್ನು ಸ್ವಾಗತಿಸಿದರು.

ತದನಂತರ, ಕೋರಂ ಇದ್ದ ಪ್ರಯುಕ್ತ ಕುಲಸಚಿವರು ಹಾಗೂ ವ್ಯವಸ್ಥಾಪನಾ ಮಂಡಳಿಯ ಸದಸ್ಯ–ಕಾರ್ಯದರ್ಶಿ ಇವರಿಗೆ ಕಾರ್ಯಸೂಚಿ ಪ್ರಕಾರ ಮಂಡಳಿಯ ಸಭೆಯನ್ನು ಪ್ರಾರಂಭಿಸಲು ಸಭಾಧ್ಯಕ್ಷರು ಸೂಚಿಸಿದರು. ಸಭೆಯಲ್ಲಿ ಈ ಕೆಳಗಿನಂತೆ ಕಾರ್ಯಸೂಚಿ ಮೇರೆಗೆ ವಿಷಯಗಳನ್ನು ಚರ್ಚಿಸಿ, ಠರಾಯಿಸಲಾಯಿತು:

| | |
|---|---|
| ಐಟಂ–1 | **ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ರಾಯಚೂರಿನ ಎಂಟನೇಯ ಘಟಿಕೋತ್ಸವದಲ್ಲಿ ಅರ್ಹ ಅಭ್ಯರ್ಥಿಗಳಿಗೆ ಸ್ನಾತಕ ಪದವಿಗಳ ಪ್ರದಾನ ಕುರಿತು**<br><br>**ಠರಾವು:**<br>ಚರ್ಚೆಯ ನಂತರ, ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ರಾಯಚೂರಿನ ಎಂಟನೇಯ ಘಟಿಕೋತ್ಸವದಲ್ಲಿ ಸ್ನಾತಕ ಪದವಿಗಳನ್ನು ಪಡೆಯುವ ಅರ್ಹ ಅಭ್ಯರ್ಥಿಗಳ ಯಾದಿಯನ್ನು ವಿದ್ಯಾವಿಷಯಕ ಪರಿಷತ್ತಿನ 16ನೇ ಸಭೆಯಲ್ಲಿ ಪರಿಶೀಲಿಸಿ ಶಿಫಾರಸ್ಸು ಮಾಡಿದ್ದನ್ನು, ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯಗಳ ಅಧಿನಿಯಮ, 2009 ರ ಕಲಂ 13(2)(viii) ರನ್ವಯ ಪರಿಗಣಿಸಿ ಸ್ನಾತಕ ಪದವಿಗಳನ್ನು ಪ್ರದಾನ ಮಾಡಲು ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದನೆ ನೀಡಿತು.<br><br>**(ಕ್ರಮ : ಕುಲಸಚಿವರು)** |
| ಐಟಂ–2 | **ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ರಾಯಚೂರಿನ ಎಂಟನೇಯ ಘಟಿಕೋತ್ಸವದಲ್ಲಿ ಅರ್ಹ ಅಭ್ಯರ್ಥಿಗಳಿಗೆ ಸ್ನಾತಕೋತ್ತರ ಪದವಿಗಳ ಪ್ರದಾನ ಕುರಿತು**<br><br>**ಠರಾವು:**<br>ಚರ್ಚೆಯ ನಂತರ, ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ರಾಯಚೂರಿನ ಎಂಟನೇಯ ಘಟಿಕೋತ್ಸವದಲ್ಲಿ ಸ್ನಾತಕೋತ್ತರ ಪದವಿಗಳನ್ನು ಪಡೆಯುವ ಅರ್ಹ ಅಭ್ಯರ್ಥಿಗಳ ಯಾದಿಯನ್ನು ವಿದ್ಯಾವಿಷಯಕ ಪರಿಷತ್ತಿನ 16ನೇ ಸಭೆಯಲ್ಲಿ ಪರಿಶೀಲಿಸಿ ಶಿಫಾರಸ್ಸು ಮಾಡಿದ್ದನ್ನು, ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯಗಳ ಅಧಿನಿಯಮ 13(2)(viii) ರನ್ವಯ ಪರಿಗಣಿಸಿ ಸ್ನಾತಕೋತ್ತರ ಪದವಿಗಳನ್ನು ಪ್ರದಾನ ಮಾಡಲು ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದನೆ ನೀಡಿತು.<br><br>**(ಕ್ರಮ : ಕುಲಸಚಿವರು)** |

**ಐಟಂ–3** **ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ರಾಯಚೂರಿನ ಎಂಟನೇಯ ಘಟಿಕೋತ್ಸವದಲ್ಲಿ ಅರ್ಹ ವಿದ್ಯಾರ್ಥಿಗಳಿಗೆ ಬಂಗಾರದ ಪದಕ ಮತ್ತು ನಗದು ಬಹುಮಾನ/ಬಹುಮಾನಗಳನ್ನು ನೀಡುವ ಕುರಿತು**

**ಠರಾವು:**

ವಿಸ್ತೃತ ಚರ್ಚೆಯ ನಂತರ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ರಾಯಚೂರಿನ ಎಂಟನೇಯ ಘಟಿಕೋತ್ಸವದಲ್ಲಿ ಸ್ನಾತಕೋತ್ತರ ವಿದ್ಯಾರ್ಥಿಗಳಿಗಾಗಿ 16 ಕೃವಿವಿ ಬಂಗಾರದ ಪದಕಗಳು ಮತ್ತು 01 ದಾನಿಗಳ ಬಂಗಾರದ ಪದಕಗಳು, ಸ್ನಾತಕ ವಿದ್ಯಾರ್ಥಿಗಳಿಗಾಗಿ 4 ಕೃವಿವಿ ಬಂಗಾರದ ಪದಕಗಳು, 14 ದಾನಿಗಳ ಬಂಗಾರದ ಪದಕಗಳು ಹಾಗೂ 2 ನಗದು ಬಹುಮಾನ/ ಬಹುಮಾನಗಳನ್ನು ಪಡೆಯುವ ವಿಶ್ವವಿದ್ಯಾಲಯದ ವಿವಿಧ ಮಹಾವಿದ್ಯಾಲಯಗಳಲ್ಲಿಯ ಅರ್ಹ ಅಭ್ಯರ್ಥಿಗಳ ಯಾದಿಯನ್ನು ರಾಯಚೂರಿನ ವಿದ್ಯಾವಿಷಯಕ ಪರಿಷತ್ತಿನ 16ನೇ ಸಭೆಯಲ್ಲಿ ಪರಿಶೀಲಿಸಿ ಶಿಫಾರಸ್ಸು ಮಾಡಿದ್ದನ್ನು, ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯಗಳ ಅಧಿನಿಯಮ 13(2)(viii) ರನ್ವಯ ಪರಿಗಣಿಸಿ ಬಂಗಾರದ ಪದಕಗಳು ಹಾಗೂ ನಗದು ಬಹುಮಾನ/ ಬಹುಮಾನಗಳನ್ನು ನೀಡಲು ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದನೆ ನೀಡಿತು.

(ಕ್ರಮ : ಕುಲಸಚಿವರು)

**ಐಟಂ–4** **ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ರಾಯಚೂರಿನ ಒಂಭತ್ತನೇಯ ಘಟಿಕೋತ್ಸವಕ್ಕೆ ಅತಿಥಿಗಳ ಯಾದಿಯನ್ನು ಅಂತಿಮಗೊಳಿಸುವ ಕುರಿತು**

**ಠರಾವು:**

ಚರ್ಚೆಯ ನಂತರ, ಸಭೆಯು ಸರ್ವಾನುಮತದಿಂದ ರಾಯಚೂರು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಒಂಭತ್ತನೇಯ ಘಟಿಕೋತ್ಸವದ ಸಂದರ್ಭದಲ್ಲಿ ಅತಿಥಿಗಳಾಗಿ ಆಹ್ವಾನಿಸಲು ಪ್ರಸ್ತಾಪಿಸಿದ ಗಣ್ಯರ ಯಾದಿಯಂತೆ ಕ್ರಮಾನುಗತವಾಗಿ ಈ ಕೆಳಕಂಡ ಗಣ್ಯರ ವ್ಯಕ್ತಿ ಪರಿಚಯದೊಂದಿಗೆ ಗೌರವಾನ್ವಿತ ಕುಲಾಧಿಪತಿಗಳಿಗೆ ಮುಂದಿನ ಕ್ರಮಕ್ಕಾಗಿ ಸಲ್ಲಿಸಲು ಠರಾಯಿಸಿತು:

| | |
|---|---|
| 1 | ಡಾ. ಸುಧಾ ನಾರಾಯಣಮೂರ್ತಿ, ನಾರಾಯಣಮೂರ್ತಿ ಫೌಂಡೇಶನ್, ಇನ್‌ಫೋಸಿಸ್, ಬೆಂಗಳೂರು |
| 2 | ಡಾ. ತ್ರಿಲೋಚನಾ ಮೊಹಾಪಾತ್ರ, ಕಾರ್ಯದರ್ಶಿ(ಡಿ.ಎ.ಆರ್.ಇ.) ಮತ್ತು ಡೈರೆಕ್ಟರ್ ಜನರಲ್, ಐ.ಸಿ.ಎ.ಆರ್., ನವದೆಹೆಲಿ |
| 3 | ಡಾ. ಕೆ.ಎಸ್.ವ್ಯಾಸ್, ಭಾಭಾ ಅಟೋಮಿಕ್ ರಿಸರ್ಚ್ ಸೆಂಟರ್, ಟ್ರಾಂಬೆ, ಮುಂಬಯಿ |
| 4 | ಶ್ರೀ ವೆಂಕಯ್ಯ ನಾಯ್ಡು, ಮಾನ್ಯ ಭಾರತದ ಉಪ-ರಾಷ್ಟ್ರಪತಿಗಳು, ನವದೆಹೆಲಿ |
| 5 | ಡಾ. ಅಶೋಕ ದಳವಾಯಿ, ಅಡಿಶ್ನಲ್ ಕಾರ್ಯದರ್ಶಿ, ಕೃಷಿ ಮತ್ತು ರೈತರ ಕ್ಷೇಮಾಭಿವೃದ್ಧಿ ಮಂತ್ರಾಲಯ, ಕೃಷಿ ಸಹಕಾರ ಮತ್ತು ರೈತರ ಕ್ಷೇಮಾಭಿವೃದ್ಧಿ ಇಲಾಖೆ, ಭಾರತ ಸರಕಾರ, ಕೃಷಿ ಭವನ, ನವದೆಹೆಲಿ. |
| 6 | ಡಾ. ಬಿ.ಎಸ್. ಪಾಟೀಲ್, ಡೈರೆಕ್ಟರ್, ಫ್ರೂಟ್ಸ್ & ವೆಜಿಟೇಬಲ್ ಇಂಪ್ರೋವ್‌ಮೆಂಟ್ ಸೆಂಟರ್, ಟೆಕ್ಸಾಸ್, ಯು.ಎಸ್.ಎ. |

(ಕ್ರಮ : ಕುಲಸಚಿವರು)

**ಹೆಚ್ಚುವರಿ ಕಾರ್ಯಸೂಚಿ ವಿಷಯಗಳು.**

**ಐಟಂ–1** **ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ರಾಯಚೂರಿನಲ್ಲಿ ಆಸ್ತಿ ಅಧಿಕಾರಿಯವರ ಹುದ್ದೆಯನ್ನು ಸೃಜಿಸಲು ಅನುಮೋದನೆ ನೀಡುವ ಕುರಿತು.**

**ಠರಾವು:**

ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿದ ನಂತರ, ವಿಶ್ವವಿದ್ಯಾಲಯಕ್ಕೆ ಯಾವುದೇ ಹೊರೆ ಇಲ್ಲದಂತೆ ಮಂಜೂರಾದ ಕಾರ್ಯನಿರ್ವಾಹಕರ ಅಭಿಯಂತರರ (ಸಿವಿಲ್) ಹುದ್ದೆಯನ್ನು ಮೇಲ್ದರ್ಜೆಗೇರಿಸಿ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ರಾಯಚೂರಿನಲ್ಲಿ ಆಸ್ತಿ ಅಧಿಕಾರಿಯವರ ಹುದ್ದೆಯನ್ನು ಸೃಜಿಸಲು ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದಿಸಿತು.

(ಕ್ರಮ : ಕುಲಸಚಿವರು)

| | |
|---|---|
| ಐಟಂ–2 | **ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ರಾಯಚೂರಿನಲ್ಲಿ ಆಡಳಿತಾಧಿಕಾರಿಯವರ ಹುದ್ದೆಯನ್ನು ಸೃಜಿಸಲು ಅನುಮೋದನೆ ನೀಡುವ ಕುರಿತು.**<br><br>**ಠರಾವು:**<br>ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿದ ನಂತರ, ವಿಶ್ವವಿದ್ಯಾಲಯಕ್ಕೆ ಯಾವುದೇ ಹೊರೆ ಇಲ್ಲದಂತೆ ಮಂಜೂರಾದ ಉಪ–ಆಡಳಿತಾಧಿಕಾರಿಯವರ ಹುದ್ದೆಯನ್ನು ಮೇಲ್ದರ್ಜೆಗೇರಿಸಿ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ರಾಯಚೂರಿನಲ್ಲಿ ಆಡಳಿತಾಧಿಕಾರಿಯವರ ಹುದ್ದೆಯನ್ನು ಸೃಜಿಸಲು ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದಿಸಿತು.<br>**(ಕ್ರಮ : ಕುಲಸಚಿವರು)** |
| | **ಅಧ್ಯಕ್ಷರ ಅಪ್ಪಣೆ ಮೇರೆಗೆ ಬರುವ ಇತರೆ ವಿಷಯಗಳು** |
| 1. | ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯಗಳಲ್ಲಿ 371(ಜೆ) ರ ಮೀಸಲಾತಿಯನ್ವಯ ನೇರ ನೇಮಕಾತಿಯಡಿ ಖಾಲಿ ಇರುವ ಹುದ್ದೆಗಳನ್ನು ಅತೀ ಜರೂರು ಭರ್ತಿ ಮಾಡಿಕೊಳ್ಳಲು ಸೂಚಿಸಿರುವ ಸರಕಾರದ ಸುತ್ತೋಲೆ ಸಂ. ಕೃಇ 39 ಕೃವಿವಿ 2019 ದಿನಾಂಕ 4–2–2019 ಅನ್ನು ಸಭೆಯ ಅವಗಾಹನೆಗೆ ತರಲಾಯಿತು. ಇದುವರೆಗೆ 371(ಜೆ) ರ ಮೀಸಲಾತಿಯನ್ವಯ ಭರ್ತಿ ಮಾಡಿಕೊಂಡಿರುವ ಬಗ್ಗೆ ಚರ್ಚಿಸಲಾಯಿತು ಹಾಗೂ ಈಗ ಬಾಕಿ ಉಳಿದಿರುವ 371(ಜೆ) ಅಡಿ ಮೀಸಲಿಟ್ಟಿರುವ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲು ಸರ್ವಸದಸ್ಯರು ಆಗ್ರಹಿಸಿದರು.<br><br>**ಠರಾವು :**<br>ಕೃವಿವಿ ರಾಯಚೂರಿನಲ್ಲಿ ಸಂವಿಧಾನದ 371(ಜೆ) ರ ಮೀಸಲಾತಿಯನ್ವಯ ನೇರ ನೇಮಕಾತಿಯಡಿ ಇನ್ನೂ ಖಾಲಿ ಇರುವ ಶಿಕ್ಷಕ ಹಾಗೂ ಶಿಕ್ಷಕೇತರರ ಹುದ್ದೆಗಳನ್ನು ಅಂದರೆ ಗ್ರೂಪ್–ಎ, ಬಿ, ಸಿ ಮತ್ತು ಡಿ ದರ್ಜೆಯ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳುವಂತೆ ಕ್ರಮಕೈಗೊಳ್ಳಲು ಮಾನ್ಯ ವ್ಯವಸ್ಥಾಪನಾ ಮಂಡಳಿಯು ಠರಾಯಿಸಿತು.<br>**(ಕ್ರಮ : ಕುಲಸಚಿವರು)** |
| 2. | **ಠರಾವು :**<br><br>ಮಾನ್ಯ ಸದಸ್ಯರಾದ ಡಾ. ಶಿವರಾಜ ಪಾಟೀಲ ಇವರು ಸಲಹೆ ನೀಡಿದಂತೆ ವಿಶ್ವವಿದ್ಯಾಲಯದ ಮುಖ್ಯ ಆವರಣದ ಹೊಸ ಏರಿಯಾದಲ್ಲಿ ಸ್ನಾತಕ ವಿದ್ಯಾರ್ಥಿಗಳ ಕಲಿಕಾ ಕಾರ್ಯಾನುಭವದಡಿ ಬೆಳೆಗಳ ಉತ್ಪಾದನೆಗಾಗಿ, ಸ್ನಾತಕೋತ್ತರ ವಿದ್ಯಾರ್ಥಿಗಳ ಸಂಶೋಧನೆ ಮತ್ತು ವಿವಿಧ ಯೋಜನೆಗಳ ಸಂಶೋಧನೆಗಾಗಿ 500 ಎಕರೆಗೆ ಬೇಕಾಗುವಷ್ಟು ನೀರು ಸಂಗ್ರಹಿಸಿಡಲು ಕೃಷಿ ಹೊಂಡಗಳನ್ನು ನಿರ್ಮಿಸಲು ಸಾಧ್ಯತೆವಿರುವ ಬಗ್ಗೆ ಮತ್ತು ನೀರು ನಿರ್ವಹಣೆಯ ಬಗ್ಗೆ ಪರಿಶೀಲಿಸಲು ಸಮಿತಿಯನ್ನು ರಚಿಸಲು ಹಾಗೂ ಅನುದಾನಕ್ಕಾಗಿ ಸರಕಾರದ ಕಾರ್ಯದರ್ಶಿಗಳು, ಸಣ್ಣ ನೀರಾವರಿ ಇಲಾಖೆ ಇವರಿಗೆ ಪ್ರಸ್ತಾವನೆ ಸಲ್ಲಿಸಲು ಠರಾಯಿಸಲಾಯಿತು. ಅಲ್ಲದೆ, ಕೃಷ್ಣಾ ನದಿಯ ನೀರನ್ನು ವಿಶ್ವವಿದ್ಯಾಲಯದ ಮುಖ್ಯ ಆವರಣಕ್ಕೆ ತರುವ ನಿಟ್ಟಿನಲ್ಲಿ ಸರಕಾರಕ್ಕೆ ಪತ್ರ ಬರೆಯಲು ಸಹ ಠರಾಯಿಸಲಾಯಿತು.<br>**(ಕ್ರಮ : ಸಂಶೋಧನಾ ನಿರ್ದೇಶಕರು)** |
| 3 | **ಠರಾವು :**<br><br>ಮಾನ್ಯ ಸದಸ್ಯರಾದ ಶ್ರೀ ವೀರನಗೌಡ ಪರಸರೆಡ್ಡಿ ಇವರು ಸಲಹೆ ನೀಡಿದಂತೆ ಚಿತ್ತಾಮರ ಕೃಷಿ ಸಂಶೋಧನಾ ಕೇಂದ್ರಕ್ಕೆ ನೀರಾವರಿಗಾಗಿ ಕಾಗಿನಾ ನದಿಯಿಂದ ನೀರು ತರುವ ಯೋಜನೆಯನ್ನು ಕಾರ್ಯರೂಪಕ್ಕೆ ತರಲು ಅನುದಾನಕ್ಕಾಗಿ ಸರಕಾರದ ಕಾರ್ಯದರ್ಶಿಗಳು, ಸಣ್ಣ ನೀರಾವರಿ ಇಲಾಖೆ ಇವರಿಗೆ ಪ್ರಸ್ತಾವನೆ ಸಲ್ಲಿಸಲು ಹಾಗೂ ಈ ಕುರಿತು ತ್ವರಿತ ಕ್ರಮಕೈಗೊಳ್ಳಲು ಠರಾಯಿಸಲಾಯಿತು.<br>**(ಕ್ರಮ : ಸಂಶೋಧನಾ ನಿರ್ದೇಶಕರು)** |

| | |
|---|---|
| 4 | **ಠರಾವು :**<br><br>ಕೃವಿವಿ ರಾಯಚೂರಿನ ವಿವಿಧ ಆವರಣಗಳಲ್ಲಿಯ ಆವರ್ತನಿಧಿ ಯೋಜನೆಗಳ ಮೊತ್ತವನ್ನು ಹಣಕಾಸು ನಿಯಂತ್ರಣಾಧಿಕಾರಿಯವರ ಆಧೀನದಲ್ಲಿಟ್ಟು, ವರ್ಷಕ್ಕೆ ಬೇಕಾಗುವ ಅನುದಾನವನ್ನು ಪ್ರಧಾನ ಅನ್ವೇಷಕರು ಬೇಡಿಕೆ ಸಲ್ಲಿಸಿ ಪಡೆಯುವಂತೆ ವ್ಯವಸ್ಥೆ ಮಾಡಲು ಸರ್ವಾನುಮತದಿಂದ ಠರಾಯಿಸಲಾಯಿತು ಹಾಗೂ ಆವರ್ತನಿಧಿ ನಿಯಮಾವಳಿಗಳನ್ನು ಮರುಪರಿಶೀಲಿಸಿ ಸೂಕ್ತಕ್ರಮವಿಡುವಂತೆ ತೀರ್ಮಾನಿಸಲಾಯಿತು.<br>**(ಕ್ರಮ : ಸಂಶೋಧನಾ ನಿರ್ದೇಶಕರು)** |
| 5 | **ಠರಾವು :**<br><br>ಮಾನ್ಯ ಸದಸ್ಯರಾದ ಶ್ರೀ ವೀರನಗೌಡ ಪರಸರೆಡ್ಡಿ ಇವರು ನಾಲವಾರದಲ್ಲಿ ಕೃಷಿ ವಿಸ್ತರಣಾ ಶಿಕ್ಷಣಾ ಕೇಂದ್ರವನ್ನು ಸ್ಥಾಪಿಸಲು ಕ್ರಮಕೈಗೊಳ್ಳುವಂತೆ ಸಲಹೆ ನೀಡಿರುವ ವಿಷಯವನ್ನು ಹಾಗೂ ಮಾನ್ಯ ಸದಸ್ಯರಾದ ಶ್ರೀ ಅಮರೇಶ ಬಲ್ಲಿದವ ಅವರು ದೇವದುರ್ಗದಲ್ಲಿ ಹೊಸದಾಗಿ ಕೃಷಿ ವಿಸ್ತರಣಾ ಶಿಕ್ಷಣ ಕೇಂದ್ರವನ್ನು ಮತ್ತು ಮೇಣಸಿನಕಾಯಿ ಬೇಸಾಯದಲ್ಲಿ ಸಂಶೋಧನಾ ಚಟುವಟಿಕೆಗಳನ್ನು ಕೈಗೊಳ್ಳುವ ಸಲುವಾಗಿ ದೇವದುರ್ಗದಲ್ಲಿ ಕೃಷಿ ಸಂಶೋಧನಾ ಕೇಂದ್ರವನ್ನು ಸ್ಥಾಪಿಸಲು ಸಲಹೆ ನೀಡಿರುವ ವಿಷಯವನ್ನು ಚರ್ಚಿಸಿ, ಈ ಬಗ್ಗೆ ಮಾನ್ಯ ವ್ಯವಸ್ಥಾಪನಾ ಮಂಡಳಿಯ 32ನೇ ಹಾಗೂ 38ನೇ ಸಭೆಯಲ್ಲಿ ನಿರ್ಣಯಿಸಿದಂತೆ ತ್ವರಿತ ಕ್ರಮಕೈಗೊಳ್ಳಲು ನಿರ್ಣಯಿಸಲಾಯಿತು.<br>**(ಕ್ರಮ : ಸಂಶೋಧನಾ ನಿರ್ದೇಶಕರು / ವಿಸ್ತರಣಾ ನಿರ್ದೇಶಕರು)** |
| 6 | **ಠರಾವು :**<br><br>ಮಾನ್ಯ ಸದಸ್ಯರಾದ ಶ್ರೀಮತಿ ಹೇಮಾವತಿ ಲಂಕೇಶ ಇವರು ಸಲಹೆ ನೀಡಿದಂತೆ ಕೃಷಿ ಸಂಶೋಧನಾ ಕೇಂದ್ರ, ಗಂಗಾವತಿಯಲ್ಲಿ ಅವಶ್ಯಕ ಅಭಿವೃದ್ಧಿ ಕಾರ್ಯಗಳಾದ ಸಿಸಿ ರಸ್ತೆ, ಕೇಂದ್ರದ ಸುತ್ತಲು ಕಂಪೌಂಡ್ ಗೋಡೆ, ರೈತರ ವಸತಿನಿಲಯದ ಊಟದ ಮನೆಯ ವಿಸ್ತರಣಾ ಕಾಮಗಾರಿಗಳನ್ನು ಕ್ರಮಕೈಗೊಳ್ಳಲು ಹಾಗೂ ರೈತರ ವಸತಿನಿಲಯದ ಮೇಲ್ಛಾವಣಿಯಲ್ಲಿ ಸೌರವಿದ್ಯುತ್ ಘಟಕ ಅಳವಡಿಸಲು ಠರಾಯಿಸಲಾಯಿತು.<br>**(ಕ್ರಮ : ಕಾರ್ಯನಿರ್ವಾಹಕ ಅಭಿಯಂತರರು)** |
| 7 | **ಠರಾವು :**<br><br>ಮಾನ್ಯ ಸದಸ್ಯರಾದ ಡಾ. ಎಂ. ಶೇಖರಗೌಡ ಇವರು ಸಲಹೆ ನೀಡಿದಂತೆ ವಿಶ್ವವಿದ್ಯಾಲಯದ ಎಲ್ಲಾ ಆವರಣಗಳಲ್ಲಿಯ ಕಟ್ಟಡಗಳ ಮೇಲ್ಛಾವಣಿಯಲ್ಲಿ ಸೌರವಿದ್ಯುತ್ ಘಟಕಗಳನ್ನು ಅಳವಡಿಸಲು ಠರಾಯಿಸಲಾಯಿತು.<br>**(ಕ್ರಮ : ಕಾರ್ಯನಿರ್ವಾಹಕ ಅಭಿಯಂತರರು)** |

ಸಭೆಯ ಅಧ್ಯಕ್ಷರಿಗೆ ಹಾಗೂ ಗೌರವಾನ್ವಿತ ಸದಸ್ಯರುಗಳಿಗೆ ಕುಲಸಚಿವರು ವಂದನೆ ಸಲ್ಲಿಸುವುದರೊಂದಿಗೆ ಸಭೆಯು ಮುಕ್ತಾಯಗೊಂಡಿತು.

| ಸಹಿ /- 25-3-2019 | ಸಹಿ /- 25-3-2019 |
|---|---|
| **(ಕೆ.ಎನ್. ಕಟ್ಟಿಮನಿ)**<br>ಕುಲಪತಿಗಳು ಹಾಗೂ ಅಧ್ಯಕ್ಷರು<br>ವ್ಯವಸ್ಥಾಪನಾ ಮಂಡಳಿ, ಕೃವಿವಿ ರಾಯಚೂರು. | **(ಎಂ.ಜಿ. ಪಾಟೀಲ)**<br>ಕುಲಸಚಿವರು ಹಾಗೂ ಸದಸ್ಯ-ಕಾರ್ಯದರ್ಶಿ<br>ವ್ಯವಸ್ಥಾಪನಾ ಮಂಡಳಿ, ಕೃವಿವಿ ರಾಯಚೂರು. |

**(ಎಂ.ಜಿ. ಪಾಟೀಲ)**
ಕುಲಸಚಿವರು ಹಾಗೂ ಸದಸ್ಯ-ಕಾರ್ಯದರ್ಶಿ
ವ್ಯವಸ್ಥಾಪನಾ ಮಂಡಳಿ, ಕೃವಿವಿ ರಾಯಚೂರು.